(ಇಂದು ದಿನಾಂಕ:11-06-2026 ರಂದು ಸಾಕ್ಷಿದಾರರನ್ನು ಕರೆಯಿಸಲಾಯಿತು, ಪ್ರಮಾಣ ವಚನ ಬೋಧಿಸಲಾಯಿತು)

**ಮುಖ್ಯ ವಿಚಾರಣೆ: ಅರ್ಜಿದಾರ ಪರ ವಕೀಲರಿಂದ :-**

ಮುಖ್ಯ ವಿಚಾರಣೆ ಪ್ರಮಾಣ ಪತ್ರ ಸಲ್ಲಿಸಿದ್ದೇನೆ. ಪ್ರಮಾಣ ಪತ್ರದಲ್ಲಿರುವ ಎಲ್ಲಾ ಅಂಶಗಳು ಸತ್ಯವಾಗಿರುತ್ತವೆ.

**ಪಾಟೀ ಸವಾಲುಃ ಎದುರುದಾರರ ನಂ.2 ಪರ ಶ್ರೀ ಎಸ್ ಎನ್ ಎಮ್ ವಕೀಲರಿಂದ.**

1. ವಿನೋದಕುಮಾರ ನನ್ನ ಸ್ನೇಹಿತ ಮತ್ತು ಸಹೋದ್ಯೋಗಿ ಆಗಬೇಕು. ನಾನು ಜೆ ಎಸ್ ಡಬ್ಲ್ಯೂ ಸ್ಟೀಲ್ ಕಂಪನಿಯಲ್ಲಿ ಕೆಲಸ ಮಾಡುವ ಬಗ್ಗೆ ಯಾವುದೇ ಅಧೀಕೃತ ದಾಖಲೆಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುವುದಿಲ್ಲ ಎಂದರೆ ಸರಿ. ನಾನು ಅಪಘಾತವನ್ನು ನೋಡಿರುವುದಿಲ್ಲ. ನಾನು ವಿನೋದಕುಮಾರ ರವರ ಕೆಲಸ ಕಾರ್ಯ ವೈಖರಿಯನ್ನು ನಿರ್ಧರಿಸುವ ಅಧೀಕೃತ ವ್ಯಕ್ತಿ ಅಲ್ಲ ಎಂದರೆ ಸರಿ. ವಿನೋದಕುಮಾರ ರವರ ಆದಾಯ ಮತ್ತು ನಷ್ಟದ ಬಗ್ಗೆ ಅಧೀಕೃತ ಮಾಹಿತಿ ನೀಡುವ ಅಧೀಕೃತ ವ್ಯಕ್ತಿ ಅಲ್ಲ ಎಂದರೆ ಸರಿ. ನಾನು ವಿನೋದಕುಮಾರ ರವರಿಗೆ ಅನುಕೂಲವಾಗುವ ರೀತಿಯಲ್ಲಿ ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯನ್ನು ವಿಚಾರಿಸಿ ನಂತರ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ. ಸರಿ ಇದೆ,

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು,
ಸಿಂಧನೂರು

(ಇಂದು ದಿನಾಂಕ:11-06-2026 ರಂದು ಸಾಕ್ಷಿದಾರರನ್ನು ಕರೆಯಿಸಲಾಯಿತು, ಪ್ರಮಾಣ ವಚನ ಬೋಧಿಸಲಾಯಿತು)

**ಪಾಟೀ ಸವಾಲುಃ ಎದುರುದಾರರ ನಂ.1 ಪರ ವಕೀಲರಿಂದ.**

1. ಅಪಘಾತದ ದಿನ ಮೋ.ಸೈ. ನಾನೇ ಚಲಾಯಿಸುತ್ತಿದ್ದೆ. ಸದರಿ ಮೋ.ಸೈ.ನಲ್ಲಿ ನಾನು, ನನ್ನ ಹೆಂಡತಿ ಮತ್ತು ನನ್ನ ಇಬ್ಬರು ಮಕ್ಕಳು ಇದ್ದೆವು. ಸದರಿ ಮೋ.ಸೈ. ನಲ್ಲಿ ನಾಲ್ಕು ಜನ ಇದ್ದ ಕಾರಣ ಸದರಿ ಮೋ.ಸೈ. ಸಮತೋಲನ ತಪ್ಪಿ ನನ್ನ ತಪ್ಪಿನಿಂದ ಅಪಘಾತವಾಗಿರುತ್ತದೆ ಎಂದರೆ ಸರಿಯಲ್ಲ. ಎದುರುದಾರ ನಂ.1 ಇವರು ತಮ್ಮ ವಾಹನವನ್ನು ನಿಧಾನವಾಗಿ ಚಲಾಯಿಸುತ್ತಿದ್ದರು ಎಂದರೆ ಸರಿಯಲ್ಲ. ಎದುರುದಾರ ನಂ.1 ಇವರ ವಾಹನದ ಇನ್ಸೂರೆನ್ಸ್, ಡಿ.ಎಲ್ ಸರಿಯಾಗಿ ಇದ್ದ ಕಾರಣ ಎದುರುದಾರ ನಂ.2 ಇವರು ಪರಿಹಾರ ಕೊಡಲು ಬಾದ್ಯಸ್ಥರು ಎಂದರೆ ಸರಿ.

**ಪಾಟೀ ಸವಾಲುಃ ಎದುರುದಾರರ ನಂ.2 ಪರ ಶ್ರೀ ಎಸ್ ಎನ್ ಎಮ್ ವಕೀಲರಿಂದ.**

2. 09-07-2024 ರಂದು ಅಪಘಾತವಾಗಿರುತ್ತದೆ. ಅಪಘಾತದ ದಿನ ಮೋ.ಸೈ. ನಾನೇ ಚಲಾಯಿಸುತ್ತಿದ್ದೆ. ಮೋ.ಸೈ.ಸಂಖ್ಯೆ ಕೆಎ 36 ಇಟಿ 8268. ಸದರಿ ಮೋ.ಸೈ.ನಲ್ಲಿ ನಾನು, ನನ್ನ ಹೆಂಡತಿ ಮತ್ತು ನನ್ನ ಇಬ್ಬರು ಮಕ್ಕಳು ಇದ್ದೆವು. ರಿಷಿಕಾ ನನ್ನ ಮಗಳಿಗೆ ಯಾವುದೇ ಗಾಯಗಳು ಆಗಿರುವುದಿಲ್ಲ. ವೇದಾಂತ ಇವರಿಗೆ ಸಾದಾ ಸ್ವರೂಪದ ಗಾಯಗಳಾಗಿರುತ್ತವೆ ಎಂದರೆ ಸರಿ. ವೇದಾಂತ ಈತನಿಗೆ ಸಂಜೀವಿನಿ ಆಸ್ಪತ್ರೆಯಲ್ಲಿ ದಾಖಲು ಮಾಡಲಾಗಿತ್ತು ಮತ್ತು ಅವರನ್ನು ಮೂರು ದಿನಗಳವರೆಗೆ ಒಳರೋಗಿಯಾಗಿ ಚಿಕಿತ್ಸೆ ಪಡೆದಿರುತ್ತಾನೆ. ವೇದಾಂತ ಇವರಿಗೆ ಸಂಬಂಧಪಟ್ಟ ವೈದ್ಯಕೀಯ ದಾಖಲೆಗಳನ್ನು ಮತ್ತು ಅಸ್ಪತ್ರೆಯ ಬಿಲ್ಲುಗಳನ್ನು ಹಾಜರಪಡಿಸಿರುವುದಿಲ್ಲ ಎಂದರೆ ಸರಿಯಲ್ಲ.
3. ನನ್ನ ಮೋ.ಸೈ.ಸಂಖ್ಯೆ ಕೆಎ 36 ಇಟಿ 8268 ನೇದ್ದಕ್ಕೆ ಸಂಪೂರ್ಣ ಪ್ರಮಾಣದ ವಿಮೆ ಇರುತ್ತದೆ ಎಂದರೆ ಸರಿ. ಸದರಿ ವಿಮೆಯಲ್ಲಿ ವೈಯಕ್ತಿಕ ಅಪಘಾತಕ್ಕೆ ಪರಿಹಾರ ಪಡೆಯಬಹುದು ಎಂದರೆ ಸರಿ.

ವಾಹನಕ್ಕೆ ಆದ ಜಖಂಗಳಿಗೂ ಸಹ ಪರಿಹಾರ ಪಡೆಯಬಹುದು ಎಂದರೆ ಸರಿ. ನನ್ನ ವೈಯಕ್ತಿಕ ಅಪಘಾತಕ್ಕೆ ಸಂಬಂಧಪಟ್ಟಂತೆ ಯಾವುದೇ ಕ್ಲೇಮ್ ನ್ನು ಪಡೆದಿರುವುದಿಲ್ಲ. ನಾನು ವೈಯಕ್ತಿಕ ಕ್ಲೇಮ್ ಪಡೆದಿದ್ದರೂ ಪಡೆದಿಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನನ್ನ ವಿಮಾ ಕಂಪನಿಯವರನ್ನು ಪಕ್ಷಗಾರರನ್ನಾಗಿ ಮಾಡದ ಕಾರಣ ಅರ್ಜಿ ಊರ್ಜಿತವಾಗುವುದಿಲ್ಲ ಎಂದರೆ ಸರಿಯಲ್ಲ. ನನಗೆ ಚಾಲನಾ ಪರವಾನಿಗೆ ಇರುತ್ತದೆ, ಅದನ್ನು ನ್ಯಾಯಾಲಯಕ್ಕೆ ಹಾಜರಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಅಪಘಾತದ ದಿನ ನಾನು ಮತ್ತು ನನ್ನ ಹೆಂಡತಿ ಇಬ್ಬರು ಹೆಲ್ಮೆಟ್ ಧರಿಸಿದ್ದೆವು ಆದರೆ ಮಕ್ಕಳು ಧರಿಸಿರಲಿಲ್ಲ. ಅಪಘಾತದ ದಿನ ನಾನು ಮತ್ತು ನನ್ನ ಹೆಂಡತಿ ಇಬ್ಬರು ಹೆಲ್ಮೆಟ್ ಧರಿಸಿರಲಿಲ್ಲ ಎಂದರೆ ಸರಿಯಲ್ಲ.

4. ನನ್ನ ತಪ್ಪಿನಿಂದ ಅಪಘಾತವಾಗಿರುತ್ತದೆ ಎಂದರೆ ಸರಿಯಲ್ಲ. ಲಾರಿ ಸಂಖ್ಯೆ ಕೆಎ-29 ಬಿ 6005 ನೇದ್ದರಿಂದ ಅಪಘಾತವಾಗಿರುವುದಿಲ್ಲ ಎಂದರೆ ಸರಿಯಲ್ಲ. ಅಪಘಾತದ ನಂತರ ನಾನು ಜಿಂದಾಲ ಸಂಜೀವಿನಿ ಆಸ್ಪತ್ರೆಯಲ್ಲಿ ಹೊರರೋಗಿಯಾಗಿ ಚಿಕಿತ್ಸೆ ಪಡೆದಿರುತ್ತೇನೆ. ನಾನು ಜಿಂದಾಲ ಸಂಜೀವಿನಿ ಆಸ್ಪತ್ರೆಯಲ್ಲಿ ಮೂರು ಬಾರಿ ದಾಖಲಾಗಿರುತ್ತೇನೆ. ಆಸ್ಪತ್ರೆಯ ಬಿಲ್ಲುಗಳನ್ನು ಜಿಂದಾಲ ಕಂಪನಿಯವರು ಭರಿಸುತ್ತಾರೆ ಎಂದರೆ ಸರಿಯಲ್ಲ. ಸದರಿ ಕಂಪನಿಯಿಂದ ನನ್ನ ಕುಟುಂಬಕ್ಕೆ ರೂ. 3 ಲಕ್ಷ ಪರಿಹಾರ ಸಿಕ್ಕಿರುತ್ತದೆ. ಆಸ್ಪತ್ರೆಯ ಒಟ್ಟು ಖರ್ಚು ರೂ.7.5 ಲಕ್ಷ ಆಗಿರುತ್ತದೆ. ಸದರಿ ಖರ್ಚಿಗೆ ಸಂಬಂಧಿಸಿದಂತೆ ನಾನು ಯಾವುದೇ ದಾಖಲೆಗಳನ್ನು ನೀಡಿಲ್ಲ ಎಂದರೆ ಸರಿಯಲ್ಲ. ನನ್ನ ಬಲಗಾಲಿನ ಮೊಣಕಾಲು ಕೆಳಗೆ ಅಪಘಾತ ಸ್ಥಳದಲ್ಲೆ ಕಟ್ಟ ಆಗಿರುತ್ತದೆ. ನಂತರ ಅದೇ ಆಸ್ಪತ್ರೆಯಲ್ಲಿ ಸದರಿ ಗಾಯದ ಕಾಲಿಗೆ ಸ್ಕೀನ್ ಡ್ರಾಪ್ಪಿಂಗ್ ಮಾಡಿರುತ್ತಾರೆ.

5. ನಂತರ ನಾನು ಬೆಂಗಳೂರಿನ ಆಟೋ ಬಕ್ ಹೆಲ್ತ್ ಕೇರ್ ಆಸ್ಪತ್ರೆಯಲ್ಲಿ ಕೃತಕ ಕಾಲು ಜೋಡಣೆ ಮಾಡಿರುತ್ತಾರೆ. ನಾನು ಮೊದಲಿನಂತೆ ಜೋರಾಗಿ ನಡೆಯಲಾಗುವುದಿಲ್ಲ, ಆದರೆ ನಡೆಯುತ್ತೇನೆ. ಈ ದಿನ ನ್ಯಾಯಾಲಯಕ್ಕೆ ನಾನು ಕೃತಕ ಕಾಲು ಜೋಡಣೆಯಿಂದ ನಡೆದುಕೊಂಡು ಬಂದಿರುತ್ತೇನೆ ಎಂದರೆ ಸರಿ.

6. ನಾನು ಈಗಲೂ ಜೆ ಎಸ್ ಡಬ್ಲ್ಯೂ ಸ್ಟೀಲ್ ಕಂಪನಿ ತೋರಣಗಲ್ಲ (ಜಿಂದಾಲ) ನಲ್ಲಿ ಕಛೇರಿ ಕೆಲಸ ಮಾಡುತ್ತೇನೆ ಎಂದರೆ ಸರಿ. ಅಪಘಾತದ ಪೂರ್ವದಲ್ಲಿ ನನಗೆ ಸಂಬಳವು ರೂ.52,991/- ಬರುತ್ತಿತ್ತು. ಅಪಘಾತದ ನಂತರ ನನಗೆ ಸಂಬಳವು ಜನವರಿ -2025 ರಂದು ರೂ.61,974/- ಇತ್ತು ಎಂದರೆ ಸರಿ. ನಾನು ಹಾಜರಪಡಿಸಿದ ವೇತನ ಪ್ರಮಾಣ ಪತ್ರ ಆಕ್ಟೋಬರ್-25 ಮತ್ತು ಸೆಪ್ಟೆಂಬರ್ -25 ರ ಸಂಬಳವು ರೂ.55,653/- ಇತ್ತು ಎಂದರೆ ಸರಿ. ಅಪಘಾತವಾದ ನಂತರ ನನ್ನ ವೇತನ ಹೆಚ್ಚಾಗಿರುತ್ತದೆ ಎಂದರೆ ಸರಿ. ನಾನು ಹಾಜರಪಡಿಸಿದ ಸಿಟಿಸಿ ಬ್ರೇಕ್‌ಅಪ್ ನಲ್ಲಿ ವಾರ್ಷಿಕ ಆದಾಯವು ರೂ.65,000/- ದಷ್ಟು ಹೆಚ್ಚಾಗಿರುತ್ತದೆ ಎಂದರೆ ಸರಿ.

7. ನಾನು ಈಗಲೂ ಸಹ ಆದಾಯ ತೆರಿಗೆ ಕಟ್ಟುತ್ತೇನೆ ಎಂದರೆ ಸರಿ. ಸದರಿ ಅಪಘಾತದಿಂದ ನನ್ನ ಉದ್ಯೋಗದಿಂದ ನನ್ನನ್ನು ವಜಾ ಮಾಡಿರುವುದಿಲ್ಲ. ನನ್ನ ಕೆಲಸವು ನಾನಾಗಿಯೇ ಬಿಟ್ಟು ಹೋಗುವವರೆಗೆ ಮತ್ತು ಅವರಾಗಿ ತೆಗೆಯುವವರೆಗೆ ಇರುತ್ತದೆ ಎಂದರೆ ಸರಿ. ನನಗೆ ಯಾವುದೇ ಹಿಂಬಡ್ತಿ ಆಗಿಲ್ಲ ಎಂದರೆ ಸರಿ, ಅದೇರೀತಿ ಮುಂಬಡ್ತಿಯು ಸಹ ಆಗಿರುವುದಿಲ್ಲ. ನನಗೆ ಬರುವ ಆದಾಯದಲ್ಲಿ ಯಾವುದೇ ಕೊರತೆವುಂಟಾಗಿಲ್ಲ ಎಂದರೆ ಸರಿಯಲ್ಲ. ನನ್ನ ವೃತ್ತಿಯು ರೀ ಅಸೈನ್‌ಮೆಂಟ್ ಆಗಿದ್ದರಿಂದ ನನಗೆ ರೂ.8 ಲಕ್ಷ ನಷ್ಟ ಅಗಿರುವುದಿಲ್ಲ ಎಂದರೆ ಸರಿಯಲ್ಲ. ವೈದ್ಯಕೀಯ ಬಿಲ್ಲುಗಳಿಗೂ ಮತ್ತು ವೈದ್ಯರ ಸಲಹಾ ಚೀಟಿಗಳಿಗೂ ಒಂದಕ್ಕೊಂದು ಹೊಂದಾಣಿಕೆ ಇರುವುದಿಲ್ಲ ಎಂದರೆ ಸರಿಯಲ್ಲ. ನನಗೆ ಯಾವುದೇ ಅಂಗನ್ಯೂನ್ಯತೆ ಇರುವುದಿಲ್ಲ ಎಂದರೆ ಸರಿಯಲ್ಲ. ಹೆಚ್ಚಿನ ಪರಿಹಾರ ಪಡೆಯಲು ಬಿಲ್ಲುಗಳನ್ನು ಸೃಷ್ಟಿಸಿ ನ್ಯಾಯಾಲಯಕ್ಕೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಅಪಘಾತವು ನನ್ನ ತಪ್ಪಿನಿಂದ ಆಗಿರುತ್ತದೆ ಲಾರಿ ಚಾಲಕನ ತಪ್ಪಿನಿಂದ ಆಗಿರುವುದಿಲ್ಲ ಎಂದರೆ ಸರಿಯಲ್ಲ.

8. ಲಾರಿ ಚಾಲಕನಿಗೆ ಸೂಕ್ತವಾದ ಚಾಲನಾ ಪರವಾನಿಗೆ ಇರದ ಕಾರಣ ಮತ್ತು ಲಾರಿ ಸಂಖ್ಯೆ ಕೆಎ-29 ಬಿ 6005 ನೇದ್ದಕ್ಕೆ ಸೂಕ್ತವಾದ ದಾಖಲೆಗಳು ಇರದ ಕಾರಣ ಎದುರುದಾರ ನಂ.2 ಇವರು ಪರಿಹಾರ ಕೊಡಲು ಬಾದ್ಯಸ್ಥರು ಅಲ್ಲ ಎಂದರೆ ಸರಿಯಲ್ಲ. ಎದುರುದಾರರ ನಂ.1 ರವರು ಮೋ.ವಾ. ಕಾಯ್ದೆ

ಮತ್ತು ವಿಮಾ ಶರತ್ತುಗಳನ್ನು ಉಲ್ಲಂಘನೆ ಮಾಡಿದ ಕಾರಣ ಎದುರುದಾರ ನಂ.2 ಇವರು ಪರಿಹಾರ ಕೊಡಲು ಬಾಧ್ಯಸ್ಥರಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯನ್ನು ವಿಚಾರಿಸಿ ನಂತರ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ. ಸರಿ ಇದೆ,
ಸಹಿ/-

ಹಿರಿಯ ಸಿವಿಲ್ ನ್ಯಾಯಾಧೀಶರು,
ಸಿಂಧನೂರು